**ಸಿವಿಲ್ ನ್ಯಾಯಾಧೀಶರು ಅಂಕೋಲಾ ರವರ ನ್ಯಾಯಾಲಯದಲ್ಲಿ**

**ದಿನಾಂಕ 5 ನೇ ಸೆಪ್ಟೆಂಬರ್ 2018**

**ಉಪಸ್ಥಿತರು**

**ಶ್ರೀ ಶಂಭುಲಿಂಗಯ್ಯ ಮೂಡಿಮಠ್,**

**ಬಿ.ಕಾಂ.,ಎಲ್ಎಲ್.ಬಿ.(ಸ್ಪೆ),**

**ಸಿವಿಲ್ ನ್ಯಾಯಾಧೀಶರು, ಅಂಕೋಲಾ.**

***ಮೂಲ ದಾವಾ ನಂ.82 /2018***

**ವಾದಿಯರಃ ಅರ್ಜಿದಾರರು**

1. ಅ.ಕು.ಮೆ.ಶ್ರೀ ಗಜಾನನ ಮೋಹನ ನಾಯ್ಕ
ಪ್ರಾಯ 35 ವರ್ಷ, ಉದ್ಯೋಗಃ ಖಾಸಗಿ
ಸಾಃ ಮಂಜಳ್ಳಿ ಕ್ರಾಸ್, ಶಿರಸಿ, (ಉ.ಕ.)

2. ಶ್ರೀ ರಮೇಶ ರಾಮಚಂದ್ರ ನಾಯ್ಕ,
ಪ್ರಾಯ 65 ವರ್ಷ, ಉದ್ಯೋಗಃ ನಿವೃತ್ತ
ನೌಕರ, ಸಾಃ ಕೋಟೆವಾಡಾ,
ಅಂಕೋಲಾ, (ಉ,ಕ.)

3. ಶ್ರೀಮತಿ ರಾಧಾಬಾಯಿ ಶೇಷು ನಾಯ್ಕ,
ಪ್ರಾಯ 70 ವರ್ಷ, ಉದ್ಯೋಗಃ ಮನೆಗೆಲಸ,
ಸಾಃ ಚಂದಾವರ ಕ್ರಾಸ್, ಕುಮಟಾ,
(ಉ.ಕ.)

4. ಶ್ರೀಮತಿ ಸುಮನಾ ಕೇಶವ ನಾಯ್ಕ,
ಪ್ರಾಯ 68 ವರ್ಷ,
ಉದ್ಯೋಗಃ ಮನೆಗೆಲಸ,
ಸಾಃ ಕಾನಬೀರ ದೇವಸ್ಥಾನದ ಹತ್ತಿರ,
ಭಾವಿಕೇರಿ, ಅಂಕೋಲಾ.

5. ಶ್ರೀಮತಿ ಸುಜಾತಾ ಲೀಲಾನಾಥ ನಾಯ್ಕ,
ಪ್ರಾಯ 62 ವರ್ಷ, ಉದ್ಯೋಗಃ ಮನೆಗೆಲಸ,
ಸಾಃ ಲಕ್ಷ್ಮೇಶ್ವರ, ಕೆರೆಕಟ್ಟೆ, ಅಂಕೋಲಾ.

6. ಶ್ರೀಮತಿ ನಿರ್ಮಲಾ ರಾಮಕೃಷ್ಣ ನಾಯ್ಕ,
ಪ್ರಾಯಃ 60 ವರ್ಷ, ಉದ್ಯೋಗಃ ಮನೆಗೆಲಸ,
ಸಾಃ 2 ನಂ.ಶಾಲೆಯ ಹತ್ತಿರ, ಭಾವಿಕೇರಿ,
ಅಂಕೋಲಾ.

(ಶ್ರೀ ವಿ.ವಿ.ಶಾನಭಾಗ್, ವಕೀಲರು)

**-ವಿರುದ್ಧ-**

**ಪ್ರತಿವಾದಿಯರು** ಃ 1. ಶ್ರೀ ಮೋಹನ ಶೇಷು ನಾಯ್ಕ,
**ಎದುರುದಾರರು** ಅದ್ಯಕ್ಷರು, ಶ್ರೀ ಮಹಾಸತಿ ಅಭಿವೃದ್ಧಿ ಸಮಿತಿ,
ಹೊನ್ನೆಕೇರಿ, ಕುಂಬಾರಕೇರಿ,
ಲಕ್ಷ್ಮೇಶ್ವರ, ಅಂಕೋಲಾ,
ಸಾಃ ಕುಂಬಾರಕೇರಿ, ಬಂಡಿಕಟ್ಟೆ ಹತ್ತಿರ,
ಅಂಕೋಲಾ.

2. ಶ್ರೀ ಗಣಪತಿ ಓಮು ನಾಯ್ಕ,
ಉಪಾದ್ಯಕ್ಷರು, ಸಾಃ ಬೇಳಾ ಬಂದರ ರೋಡ್,
ಕನಸಿಗದ್ದೆ, ಅಂಕೋಲಾ.

೩. ಶ್ರೀ ಸುನೀಲ ಎಸ್.ನಾಯ್ಕ,

ಪ್ರಧಾನ ಕಾರ್ಯದರ್ಶಿ,

ಸಾಃ ಹೊನ್ನೇಕೇರಿ, ಅಂಕೋಲಾ.

4. ಶ್ರೀ ಧನಂಜಯ ಎಲ್.ನಾಯ್ಕ,

ಸಹ ಕಾರ್ಯದರ್ಶಿ,

ಸಾಃ ಕುಂಬಾರಕೇರಿ, ಅಂಕೋಲಾ.

5. ಶ್ರೀ ಸುರೇಶ ಏಕನಾಥ ನಾಯ್ಕ,

ಸಾಃ ಕುಂಬಾರಕೇರಿ, ಅಂಕೋಲಾ.

6. ಶ್ರೀ ಶ್ರೀನಿವಾಸ ಆರ್.ರಾಮನಾಥಕರ,

ಸಾಃ ಲಕ್ಷ್ಮೇಶ್ವರ, ಕೆರೆಕಟ್ಟೆ, ಅಂಕೋಲಾ.

7. ಶ್ರೀ ರಾಜು ಮುರಾರಿ ನಾಯ್ಕ,

ಸಾಃ ಕುಂಬಾರಕೇರಿ, ಅಂಕೋಲಾ.

8. ಶ್ರೀ ನಂದನ ಕೃಷ್ಣ ನಾಯ್ಕ,

ಸಾಃ ಹೊನ್ನೇಕೇರಿ, ಅಂಕೋಲಾ.

೯. ಶ್ರೀ ರಾಮು ಪೀರು ನಾಯ್ಕ,

ಸಾಃ ಕುಂಬಾರಕೇರಿ, ಅಂಕೋಲಾ.

10. ಶ್ರೀ ಉಮೇಶ ರಾಮಕೃಷ್ಣ ನಾಯ್ಕ,
ಸಾಃ ಕುಂಬಾರಕೇರಿ, ಅಂಕೋಲಾ.

11. ಶ್ರೀ ರವಿ ಯಾನೆ ರವೀಂದ್ರ ಜಟ್ಟಿ ನಾಯ್ಕ,
ಸಾಃ ಕನಸಿಗದ್ದೆ, ಅಂಕೋಲಾ.

12. ಶ್ರೀ ಚಂದ್ರಕಾಂತ ಗಣಪತಿ ನಾಯ್ಕ,
ಸಾಃ ಲಕ್ಷ್ಮೇಶ್ವರ, ಕೆರೆಕಟ್ಟೆ, ಅಂಕೋಲಾ.

(ಶ್ರೀ ಎಸ್.ಆರ್.ನಾರ್ವೇಕರ್ ಮತ್ತು
ಶ್ರೀ ಎಲ್.ಜಿ.ನಾಯ್ಕ, ವಕೀಲರು)

**ಮದ್ಯಂತರ ಅರ್ಜಿ ನಂ.1 ರ ಮೇಲೆ ಆದೇಶ**

ಪ್ರಸ್ತುತ ಮದ್ಯಂತರ ಅರ್ಜಿಯನ್ನು ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 39 ನಿಯಮ 1 ಮತ್ತು 2 ಹಾಗೂ ಸಹ ಕಲಂ 151 ರ ಅಡಿಯಲ್ಲಿ ಪ್ರತಿವಾದಿಯರ ವಿರುದ್ದ ದಾಖಲಿಸಿದ್ದು, ದಾವೆಯು ಅಂತಿಮವಾಗಿ ಗುಣಾವಗುಣಗಳ ಮೇಲೆ ನಿಖಾಲೆಯಾಗುವವರೆಗೆ ಪ್ರತಿವಾದಿಯರಾಗಲೀ ಅಥವಾ ಅವರ ತರ್ಫೆ ಯಾರೇ ಆಗಲೀ ದಾವಾ ಆಸ್ತಿಗಳಲ್ಲಿ ಯಾವುದೇ ಕಟ್ಟಡವನ್ನು ಕಟ್ಟದಂತೆ ಹಾಗೂ ಅನಧಿಕೃತ ಪ್ರವೇಶ ಮಾಡದಂತೆ ಹಾಗೂ ವಾದಿಯರ ಶಾಂತಿಯುತ ಕಬ್ಜಾ ಸಾಗುವಳಿಗೆ ತೊಂದರೆ ಕೊಡದಂತೆ ಪ್ರತಿವಾದಿಯರ ವಿರುದ್ಧ ತಾತ್ಪೂರ್ತಿಕ ನಿಷೇಧಾಜ್ಞೆ ಆದೇಶ ಮಾಡಬೇಕೆಂದು ಪ್ರಸ್ತುತ ಅರ್ಜಿಯನ್ನು ದಾಖಲಿಸಿದ್ದು ಇರುತ್ತದೆ.

2. ಪ್ರಸ್ತುತ ಮದ್ಯಂತರ ಅರ್ಜಿಯೊಂದಿಗೆ 1 ನೇ ವಾದಿಯು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಪ್ರಮಾಣ ಪತ್ರದಲ್ಲಿ

ಹೇಳುವುದೇನೆಂದರೆ, ದಾವಾ ಆಸ್ತಿಗಳಿಗೆ ವಾದಿಯರು ಸಾಮೂಹಿಕ ಮಾಲೀಕರಿದ್ದು, ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು ವಾದಿಯರನ್ನು ಹೊರತುಪಡಿಸಿ ಬೇರೆ ಯಾರಿಗೂ ಹಕ್ಕು ಮತ್ತು ಸ್ವಾಮಿತ್ವ ಇರುವುದಿಲ್ಲ. ದಾವಾ ಆಸ್ತಿಗಳು ವಾದಿಯರ ಕಬ್ಜಾ ವಹಿವಾಟ ಹಾಗೂ ಉಪಭೋಗದಲ್ಲಿರುತ್ತವೆ. ದಿನಾಂಕ 19.6.2018 ರಂದು ಪ್ರತಿವಾದಿಯರು ಶ್ರೀ ಮಹಾಸತಿ ದೇವಸ್ಥಾನ ಅಭಿವೃದ್ಧಿ ಸಮಿತಿ, ಹೊನ್ನೆಕೇರಿ, ಕುಂಬಾರಕೇರಿ, ಲಕ್ಷ್ಮೇಶ್ವರ, ತಾಲೂಕುಃ ಅಂಕೋಲಾ ಎಂಬ ಸಮಿತಿಯ ಪದಾಧಿಕಾರಿಗಳು ಎಂದು ಹೇಳಿಕೊಂಡು ಕರ ಪತ್ರವನ್ನು ನಮೂದಿಸಿ ಹೊನ್ನೆಕೇರಿ ಗ್ರಾಮದಲ್ಲಿ ಕರಿದೇವರ ದೇವಸ್ಥಾನವನ್ನು ಕಟ್ಟುತ್ತೇವೆ ಎಂದು ಹೇಳಿ ಸದರ್ ದೇವಸ್ಥಾನವನ್ನು ವಾದಿಯರ ಮಾಲೀಕತ್ವದ ದಾವಾ ಆಸ್ತಿಗಳ ಮಧ್ಯದಲ್ಲಿ ಕಟ್ಟುತ್ತೇವೆ ಎಂದು ಹೇಳಿಕೊಂಡು ಮತ್ತು ಜಮೀನನ್ನು ದಾನ ಮಾಡಿದ್ದಾರೆ ಎಂದು ಸುಳ್ಳು ಮಜಕೂರಿನ ಕರಪತ್ರವನ್ನು ಹೊರಡಿಸಿ ವಾದಿಯರ ಅನುಮತಿಯನ್ನು ಪಡೆಯದೇ ದಿನಾಂಕ 4.7.2018 ರಂದು ಅನಧಿಕೃತವಾಗಿ, ಬಲಾತ್ಕಾರ, ಅಹಂಕಾರ ಮತ್ತು ಗತ್ತಿನಿಂದ ದೇವಸ್ಥಾನದ ಕಟ್ಟಡವನ್ನು ದಾವಾ ಆಸ್ತಿ ಸರ್ವೆ ನಂ.66ಃ1ಕ ರ ಉತ್ತರ ದಿಕ್ಕಿನಲ್ಲಿ ದಾವಾ ಆಸ್ತಿ ಸರ್ವೆ ನಂ.67ಃ1 ರ ಪೂರ್ವ–ಪಶ್ಚಿಮ ದಿಕ್ಕಿನಲ್ಲಿ 20 ಮೀಟರ್ ಉದ್ದ ಹಾಗೂ 15 ಮೀಟರ್ ಅಗಲ ಅಡಿಪಾಯವನ್ನು ತೋಡಲು ಪ್ರಾರಂಭಿಸಿದ್ದು ಈ ಬಗ್ಗೆ ವಾದಿಯರು ಪ್ರಶ್ನಿಸಿದಾಗ ಪ್ರತಿವಾದಿಯರು ವಾದಿಯರ ಮಾತನ್ನು ಕೇಳದೇ ತಾವು ಗಣ್ಯ ವ್ಯಕ್ತಿಗಳು ಅಂತಾ ಹೇಳಿ ವಾದಿಯರ ಜಮೀನಿನಲ್ಲಿಯೇ ದೇವಸ್ಥಾನ ಕಟ್ಟುತ್ತೇವೆ ಎಂದು ಹೇಳಿದ್ದು ನಂತರ ವಾದಿಯರು ಅಂಕೋಲಾ ಪೋಲೀಸ್ ಠಾಣೆಗೆ ದೂರು ನೀಡಲು ಹೋಗಿದ್ದು ಅಲ್ಲಿ ಸಹ ಪ್ರತಿವಾದಿಯರು ತಮ್ಮ ಪ್ರಭಾವವನ್ನು ಬೀರಿ ಪೋಲೀಸರು ಸಹಾಯಕ್ಕೆ ಬರದಂತೆ ಮಾಡಿರುತ್ತಾರೆ. ಆದ್ದರಿಂದ ಪ್ರತಿವಾದಿಯರ ಕೃತ್ಯವನ್ನು

ತಡೆಗಟ್ಟುವುದು ಅವಶ್ಯವಾಗಿದ್ದು ಕಾರಣ, ವಾದಿಯರು ಪ್ರತಿವಾದಿಯರ ವಿರುದ್ಧ ನಿರಂತರ ನಿಷೇಧಾಜ್ಞೆ ಕೋರಿ ದಾವೆಯನ್ನು ಸಲ್ಲಿಸಿ ದಾವೆ ನಿಖಾಲೆಯಾಗುವವರೆಗೆ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಯಾವುದೇ ಕಟ್ಟಡ ಕಟ್ಟದಂತೆ ತಾತ್ಪೂರ್ತಿಕ ತಡೆಯಾಜ್ಞೆ ಆದೇಶ ನೀಡಬೇಕೆಂದು 1 ನೇ ಮದ್ಯಂತರ ಅರ್ಜಿಯನ್ನು ದಾಖಲಿಸಿದ್ದು ಇರುತ್ತದೆ. ವಾದಿಯರು ಕೊನೆಯದಾಗಿ ಮದ್ಯಂತರ ಅರ್ಜಿಯನ್ನು ಪುರಸ್ಕರಿಸದೇ ಹೋದರೆ ತಮಗೆ ಹೇರಳ ಲುಕ್ಸಾನು ಆಗುತ್ತದೆ. ಕಾರಣ, ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

3. ಪ್ರತಿವಾದಿಯರು ತಮ್ಮ ವಕೀಲರ ಮುಖಾಂತರ ಹಾಜರಾಗಿ 2 ನೇ ಪ್ರತಿವಾದಿ ದಾವೆಗೆ ವಿವರವಾದ ಪ್ರತಿವಾದ ಪತ್ರ ಮತ್ತು 1 ನೇ ಮದ್ಯಂತರ ಅರ್ಜಿಗೆ ತಕರಾರನ್ನು ಸಲ್ಲಿಸಿದ್ದು ಇರುತ್ತದೆ. ತಕರಾರಿನಲ್ಲಿ ಹೇಳುವುದೇನೆಂದರೆ, ವಾದಿಯರು ಸಲ್ಲಿಸಿದ ದಾವೆಯು ಸತ್ಯ ಸಂಗತಿಗಳಿಂದ ದೂರವಾಗಿದ್ದು 1 ನೇ ಮದ್ಯಂತರ ಅರ್ಜಿಯಲ್ಲಿ ನಮೂದಿಸಿದ ಎಲ್ಲಾ ವಿಷಯಗಳನ್ನು ಪ್ರತಿವಾದಿಯರು ಬಲವಾಗಿ ಅಲ್ಲಗಳೆಯುತ್ತಾರೆ. ವಾದಿಯರು ಹೊಟ್ಟೆಕಿಚ್ಚಿನಿಂದ ಹಾಗೂ ಸಮಾಜದ ಜನರ ಅಭಿವೃದ್ಧಿ ಸಹಿಸಲಾಗದೇ ಕುಚೋದ್ಯಕ್ಕಾಗಿ ಸಮಾಜದ ಧರ್ಮಾಚರಣೆಯಲ್ಲಿ ತೊಡಕನ್ನು ಉಂಟು ಮಾಡಲು ಸುಳ್ಳು ವಿಷಯವನ್ನು ಒಳಗೊಂಡು ಅರ್ಜಿ ಹಾಗೂ ದಾವೆಯನ್ನು ಸಲ್ಲಿಸಿದ್ದು ಕಾರಣ, ಅರ್ಜಿಯನ್ನು ಖರ್ಚು ಸಮೇತ ವಜಾ ಮಾಡ ಬೇಕೆಂದು ಕೋರಿಕೊಂಡಿರುತ್ತಾರೆ.

4. ಪ್ರತಿವಾದಿಯರು ಮುಂದುವರೆದು ಹೇಳುವುದೇನೆಂದರೆ, ದಾವಾ ಆಸ್ತಿಗಳಿಗೆ ವಾದಿಯರೇ ಮಾಲೀಕರು ಎನ್ನುವುದನ್ನು ವಾದಿಯರೇ ರುಜುವಾತುಪಡಿಸತಕ್ಕದ್ದು. ವಾದಿಯರಿಗೆ ತಮ್ಮ ಜಮೀನು ಎಲ್ಲದೆ

ಎಂಬ ಕಲ್ಪನೆಯಾಗಲೀ ಅಥವಾ ಅವುಗಳ ಗಡಿಯ ತಿಳುವಳಿಕೆಯಾಗಲೀ ಇರುವುದಿಲ್ಲ. ಇನ್ನೊಬ್ಬರ ಆಸ್ತಿಯನ್ನು ಕಬಳಿಸಬೇಕೆಂಬ ಹಾಗೂ ಅನಾದಿ ಕಾಲದ ಧಾರ್ಮಿಕ ಆಚರಣೆಗೆ ಅಡ್ಡಿ ಮಾಡಬೇಕೆಂದು ದಾವೆಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಯರು ಹಿಂದೂ ಕೂಮಾರಪಂಥ ಸಮುದಾಯಕ್ಕೆ ಸೇರಿದ ಸಮಾಜ ಬಾಂಧವರಿದ್ದು ಸಮಾಜದಲ್ಲಿ ಅತ್ಯಂತ ಗೌರವ ಸ್ಥಾನವನ್ನು ಹೊಂದಿದ್ದು ಕುಂಬಾರಕೇರಿ, ಲಕ್ಷ್ಮೇಶ್ವರ, ಹೊನ್ನೇಕೇರಿ, ಕಣಸಿಗದ್ದೆ, ಪಳ್ಳಿಕೇರಿ ಮುಂತಾದ ಗ್ರಾಮದಲ್ಲಿ ಶ್ರೀ ಕರಿದೇವರ ಭಕ್ತರಾಗಿದ್ದು ಹೋಳೀ ಹಬ್ಬ ಸಂದರ್ಭದಲ್ಲಿ ಕುಮಾರಪಂಥ ಸಮಾಜದಲ್ಲಿ ಹೋಳಿಯನ್ನು ಕರಿದೇವರ ಆರಾಧನೆಯ ಮೂಲಕ ಕುಂಬಾರಕೇರಿಯಲ್ಲಿ ಇರುವ ಮಹಾಸತಿ ದೇವಸ್ಥಾನದಿಂದ ಆರಂಭಿಸಿ ಮೆರವಣಿಗೆಯಲ್ಲಿ ಹೊರಟು ಬಣ್ಣ ಚೆಲ್ಲುತ್ತಾರೆ. ಹೊನ್ನೆಕೇರಿ ಹಳ್ಳದ ದಂಡೆಯಲ್ಲಿ ಕರಿದೇವರು ಬಂದು ಕೊನೆಯಾಗುವುದು. ನಂತರ ಸಮಾಜ ಬಾಂಧವರು ಹೊಳೆಯಲ್ಲಿ ಸ್ನಾನ ಮಾಡುವುದು ಪದ್ಧತಿಯಾಗಿರುತ್ತದೆ. ಈ ಪದ್ಧತಿಯು ನೂರಾರು ವರ್ಷಗಳಿಂದ ಸತತವಾಗಿ, ನಿರಂತರವಾಗಿ, ನಿರಾತಂಕವಾಗಿ ನಡೆದುಕೊಂಡು ಬಂದಿದ್ದು ಕರಿದೇವರ ಗುಡಿ ಅನಾದಿ ಕಾಲದಿಂದ ಈಗಿರುವ ಸ್ಥಳದಲ್ಲಿಯೇ ಸ್ಥಾಪಿಸಲ್ಪಟ್ಟ ಸಣ್ಣ ದೇವಸ್ಥಾನವಾಗಿರುತ್ತದೆ ಮತ್ತು ಸದರಿ ದೇವರನ್ನು ಪೂರ್ವಜರಿಂದ ಸ್ಥಾಪಿಸಲ್ಪಟ್ಟು ಸುರೇಶ ಏಕನಾಥ ನಾಯ್ಕ, ಸಾಕಿನ್ಃ ಕುಂಬಾರಕೇರಿ ಇವರು ಪೂಜಾರಿತನದಲ್ಲಿ ಪೂಜಿಸಲ್ಪಡುತ್ತದೆ. ಶ್ರೀ ಕರಿದೇವರ ಗುಡಿಯು ಶಿಥಿಲಾವಸ್ಥೆಯಲ್ಲಿರುವುದರಿಂದ ಅದರ ಜೀರ್ಣೋದ್ಧಾರ ಮಾಡುವ ಉದ್ದೇಶದಿಂದ ಮತ್ತು ಸದರಿ ದೇವಸ್ಥಾನವು ಅಂಕೋಲಾ ಗ್ರಾಮದ ಸರ್ವೆ ನಂ.64 ರಲ್ಲಿ ಪ್ರತಿಷ್ಟಾಪಿಸಲ್ಪಟ್ಟಿದ್ದು ನಂತರ ಕುಟುಂಬದ ವಿಭಜನೆಯಲ್ಲಿ ಸರ್ವೆ ನಂ.64ಃ1 ರಲ್ಲಿ ಬಂದಿರುತ್ತದೆ. ಸದರಿ ಜಮೀನಿನ ಮಾಲೀಕರಾದ

ಸುಮಿತ್ರಾ ಕೋಂ ಸಂತೋಷ ನಾಯ್ಕ ಹಾಗೂ ಅಶ್ವಿನಿ ಕೋಂ ನಿತಿನ್ ನಾಯ್ಕ ಒಪ್ಪಿಗೆಯನ್ನು ದೃಢೀಕರಿಸಿ ಒಪ್ಪಿಗೆ ಪ್ರಮಾಣ ಪತ್ರ ಹಾಗೂ ಅನಾಕ್ಷೇಪಣಾ ಪ್ರಮಾಣ ಪತ್ರವನ್ನು ಪ್ರತಿವಾದಿಯರಿಗೆ ಬರೆದು ಕೊಟ್ಟಿದ್ದು ಇರುತ್ತದೆ. ದೇವಸ್ಥಾನ ಪೂರ್ಣವಾಗಿ ಕಟ್ಟಲ್ಪಟ್ಟಿದ್ದು ಪೂಜಾ ಕಾರ್ಯವನ್ನು ಕೈಗೊಂಡಿದ್ದು ಇರುತ್ತದೆ. ನಂತರ ರುದ್ರಾ ಬೊಮ್ಮಾ ನಾಯ್ಕ ಇವರಿಗೆ ಸದರಿ ಜಮೀನು ಸೇರಿದ್ದು ಸದರಿಯವರು ಕರಿದೇವರ ನಿರ್ಮಾಣಕ್ಕೆ ಬಿಟ್ಟುಕೊಟ್ಟಿದ್ದು ಇರುತ್ತದೆ. ಈಗ ಕುಟುಂಬದ ಸದಸ್ಯರಲ್ಲಿ ಹಿಸ್ಸೆಯಾಗಿದ್ದು ಅದು ಸರ್ವೆ ನಂ.64ಃ1, 64ಃ6, 64ಃ7, 64ಃ8 ಎಂದು ವಿಭಜನೆಯಾಗಿದ್ದು ಇರುತ್ತದೆ. ದಾವಾ ಆಸ್ತಿಗಳು ದೇವಸ್ಥಾನ ಇರುವ ಜಮೀನಿನಿಂದ ಪ್ರತ್ಯೇಕವಾಗಿದ್ದು ಅವುಗಳಲ್ಲಿ ಪ್ರತಿವಾದಿಯರು ಅತಿಕ್ರಮಿಸಿದ್ದು ಇರುವುದಿಲ್ಲ. ಆ ಕಾರಣ, ವಾದಿಯರು ಸುಳ್ಳು ಮಜಕೂರಿನ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯರು ಕರಿದೇವರ ದೇವಸ್ಥಾನವು ಸರ್ವೆ ನಂ.66ಃ1ಕ, 67ಃ1ಅ ರಲ್ಲಿ ಬರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಉಳಿದಂತೆ ವಾದ ಪತ್ರದಲ್ಲಿ ನಮೂದಿಸಿದ ಎಲ್ಲಾ ಸಂಗತಿಗಳನ್ನು ಪ್ರತಿವಾದಿಯರು ಅಲ್ಲಗಳೆಯುತ್ತಾ ವಾದಿಯರು ಸುಳ್ಳು ದಾವಾ ಸಲ್ಲಿಸಿರುವುದರಿಂದ ಅದನ್ನು ವಜಾ ಮಾಡಬೇಕು ಮತ್ತು 1 ನೇ ಮಧ್ಯಂತರ ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿಕೊಂಡಿದ್ದು ಇರುತ್ತದೆ.

5. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

6. ಕಡತದಲ್ಲಿರುವ ಎಲ್ಲಾ ದಾಖಲೆಗಳನ್ನು ಅವಲೋಕಿಸಲಾಯಿತು.

7. ಈಗ ನನ್ನ ಗಮನಕ್ಕೆ ಬಂದಂತಹ ಅಂಶಗಳು ಈ ಕೆಳಗಿನಂತೆ ಇರುತ್ತವೆಃ

1. ಅರ್ಜಿದಾರಃವಾದಿಯರು ತಮ್ಮ ಪರವಾಗಿ ಮೇಲ್ನೋಟಕ್ಕೆ (ಪ್ರೈಮಾಫೇಸಿ ಕೇಸ್) ಪ್ರಕರಣ ಇದೆ ಎಂಬುದನ್ನು ರುಜುವಾತುಪಡಿಸುವರೇ?

2. ಅರ್ಜಿದಾರಃ ವಾದಿಯರು ತಮ್ಮ ಪರವಾಗಿ ಬ್ಯಾಲೆನ್ಸ್ ಆಫ್ ಕನ್ವೀನಿಯನ್ಸ್ ಇದೆ ಎಂಬುದನ್ನು ರುಜುವಾತುಪಡಿಸುವರೇ?

3. ಅರ್ಜಿದಾರಃ ವಾದಿಯರು ಮದ್ಯಂತರ ಅರ್ಜಿ ನಂ.1 ರಲ್ಲಿ ಕೋರಿದಂತೆ ಹಂಗಾಮಿ ತಾಕೀತು ಆದೇಶವನ್ನು ನೀಡದಿದ್ದರೆ ತಮಗೆ ಹೇರಳ ಲುಕ್ಸಾನಾಗುತ್ತದೆ ಎಂದು ರುಜುವಾತುಪಡಿಸುವರೇ?

4. ಹಾಗಾದರೆ ಏನು ಆದೇಶ ?

8. ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿರುತ್ತದೆಃ

ಅಂಶ ನಂ.1ಃ ಸಕಾರಾತ್ಮಕವಾಗಿ.

ಅಂಶ ನಂ.2ಃ ಸಕಾರಾತ್ಮಕವಾಗಿ.

ಅಂಶ ನಂ.3ಃ ಸಕಾರಾತ್ಮಕವಾಗಿ.

ಅಂಶ ನಂ.4ಃ ಅಂತಿಮ ಆದೇಶದಂತೆ

ಈ ಕೆಳಗಿನ ನಮೂದಿಸಿದ ಕಾರಣಗಳಿಗಾಗಿಃ

**ಕಾರಣಗಳು**

9. **ಅಂಶ ನಂ.1 ರಿಂದ 3ಃ–** ಸದರಿ ಮೂರು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಚರ್ಚೆಯ ಪುನರಾವರ್ತನೆಯನ್ನು ತಡೆಗಟ್ಟುವ ಉದ್ದೇಶದಿಂದ ಸದರಿ ಮೂರು ಆಂಶಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿರುತ್ತದೆ.

10. ಪ್ರಸ್ತುತ ದಾವೆಯನ್ನು ವಾದಿಯರು ದಾವಾ ಆಸ್ತಿಗಳ ವಾದಿಯರ ಶಾಂತಿಯುತ ಕಬ್ಜಾ ವಹಿವಾಟಿಗೆ ತೊಂದರೆ ಕೊಡದಂತೆ ಹಾಗೂ ಅತಿಕ್ರಮಣ ಮಾಡದಂತೆ ಹಾಗೂ ಯಾವುದೇ ರೀತಿ ಶಾಶ್ವತ ಕಟ್ಟಡ ಕಟ್ಟದಂತೆ ಪ್ರತಿವಾದಿಯರ ವಿರುದ್ಧ ನಿರಂತರ ನಿಷೇಧಾಜ್ಞೆ ಡಿಕ್ರಿ ಆದೇಶ ಮಾಡಬೇಕೆಂದು ಕೋರಿ ದಾಖಲಿಸಿದ್ದು ಇರುತ್ತದೆ.

11. ವಾದಿಯರ ಪ್ರಕಾರ ದಾವಾ ಆಸ್ತಿಗಳಾದ ಅಂಕೋಲಾ ಗ್ರಾಮ ಸರ್ವೆ ನಂ.66/1ಕ ಮತ್ತು ಸರ್ವೆ ನಂ.67/1 ನೇ ಆಸ್ತಿಗಳಿಗೆ ವಾದಿಯರು ಸಂಪೂರ್ಣ ಮಾಲೀಕರು ಮತ್ತು ಕಬ್ಜಾ ಸ್ವಾಧೀನಾನುಭವ ಹೊಂದಿದವರಾಗಿದ್ದು ಮತ್ತು ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ವಾದಿಯರ ಹೆಸರು ಮಾಲೀಕ ಮತ್ತು ಕಬ್ಜಾದಾರ ಎಂದು ದಾಖಲಾಗಿದ್ದು ಆದರೆ ಪ್ರತಿವಾದಿಯರು ಮಹಾಸತಿ ದೇವಸ್ಥಾನ ಅಭಿವೃದ್ಧಿ ಸಮಿತಿ ಹೊನ್ನೇಕೇರಿ, ಕುಂಬಾರಕೇರಿ, ಲಕ್ಷ್ಮೇಶ್ವರ ತಾಲೂಕು ಅಂಕೊಲ ಇದರ ಪದಾಧಿಕಾರಿಗಳು ಎಂದು ಹೇಳಿಕೊಳ್ಳುತ್ತಾ ದಾವಾ ಆಸ್ತಿಯಲ್ಲಿ ಅತಿಕ್ರಮವಾಗಿ ಕರಿದೇವರ ದೇವಸ್ಥಾನವನ್ನು ಕಟ್ಟಲು ಪ್ರಾರಂಭ ಮಾಡಿದ್ದು ಸದರಿ ದೇವಸ್ಥಾನ ಕಟ್ಟದಂತೆ ವಾದಿಯರು ವಿನಂತಿಸಿಕೊಂಡಿದ್ದು ಆದರೆ ಪ್ರತಿವಾದಿಯರು ವಾದಿಯರ ಮಾತನ್ನು ಕೇಳದೇ ಇದ್ದಾಗ ವಾದಿಯರು ಅಂಕೋಲಾ ಪೊಲೀಸ್ ಠಾಣೆಗೆ ದೂರನ್ನು ಸಲ್ಲಿಸಿದ್ದು ಸದರಿ ಅಂಕೋಲಾ ಪೋಲೀಸ್ ಠಾಣೆಯವರು ಪ್ರತಿವಾದಿಯರ ವಿರುದ್ಧ ಯಾವುದೇ ಕ್ರಮ ಜರುಗಿಸದೇ ಇದ್ದುದರಿಂದ ಅನಿವಾರ್ಯವಾಗಿ ವಾದಿಯರು ಪ್ರತಿವಾದಿಯರ ವಿರುದ್ಧ ದಾವಾ ಆಸ್ತಿಯಲ್ಲಿ ಅತಿಕ್ರಮ ಪ್ರವೇಶ ಮಾಡಿ ಯಾವುದೇ ಕಟ್ಟಡವನ್ನು ಕಟ್ಟದಂತೆ ಮತ್ತು ವಾದಿಯರ ವಹಿವಾಟಿಗೆ ತೊಂದರೆ ಕೊಡದಂತೆ ಪ್ರತಿವಾದಿಯರ ವಿರುದ್ಧ ನಿರಂತರ ನಿಷೇಧಾಜ್ಞೆ ಡಿಕ್ರಿ ಆದೇಶ

ಮಾಡಬೇಕೆಂದು ಕೋರಿ ದಾವೆ ಸಲ್ಲಿಸಿದ್ದು ಇರುತ್ತದೆ. ಮತ್ತು ದಾವೆ ನಿಖಾಲೆ ಆಗುವವರೆಗೆ ಪ್ರತಿವಾದಿಯರು ಯಾವುದೇ ರೀತಿ ಕಟ್ಟಡ ಕಟ್ಟದಂತೆ ಮತ್ತು ಕಬ್ಜಾ ಸಾಗುವಳಿಗೆ ತೊಂದರೆ ನೀಡದಂತೆ ತಾತ್ಪೂರ್ತಿಕ ನಿಷೇದಾಜ್ಞೆ ಆದೇಶ ಮಾಡಬೇಕೆಂದು 1 ನೇ ಮದ್ಯಂತರ ಅರ್ಜಿ ದಾಖಲಿಸಿದ್ದು ಇರುತ್ತದೆ.

12. ಇತ್ತ ಕಡೆ ಪ್ರತಿವಾದಿಯರು ವಾದಿಯರ ದಾವೆಗೆ ವಿವರವಾದ ಉದಾಹರಣೆಯನ್ನು ಸಲ್ಲಿಸಿದ್ದು, ಸದರಿಯವರ ಪ್ರಕಾರ ತಾವು ದಾವಾ ಆಸ್ತಿಗಳಲ್ಲಿ ಯಾವುದೇ ದೇವಸ್ಥಾನವನ್ನು ಕಟ್ಟುತ್ತಿರುವುದಿಲ್ಲ, ವಾಸ್ತವದಲ್ಲಿ ಕರಿದೇವರ ದೇವಸ್ಥಾನವನ್ನು ಅಂಕೋಲಾ ಗ್ರಾಮ ಸರ್ವೆ ನಂ.64/1, 64/6, 64/7, 64/8 ನೇದ್ದರಲ್ಲಿ ಕಟ್ಟುತ್ತಿದ್ದು, ಸದರ್ ಆಸ್ತಿಗೂ ಮತ್ತು ವಾದಿಯರ ಹೇಳಿದ ದಾವಾ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ. ವಾದಿಯರು ಕೇವಲ ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಮತ್ತು ಧಾರ್ಮಿಕ ವಿಧಿವಿಧಾನಗಳಿಗೆ ಅಡ್ಡಿಆತಂಕ ಉಂಟು ಮಾಡಬೇಕೆಂಬ ಉದ್ದೇಶದಿಂದ ದಾವೆಯನ್ನು ಸಲ್ಲಿಸಿದ್ದು ಆ ಕಾರಣ ದಾವೆಯನ್ನು ವಜಾಗೊಳಿಸಬೇಕೆಂದು ವಿನಂತಿಸಿಕೊಂಡಿದ್ದು ಇರುತ್ತದೆ.

13. 1 ನೇ ಮದ್ಯಂತರ ಅರ್ಜಿ ಹಾಗೂ ಶಫಥ ಪತ್ರ ಮತ್ತು ತಕರಾರನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು. ವಾದಿಯರು ಹಾಗೂ ಪ್ರತಿವಾದಿಯರು ಮದ್ಯಂತರ ಅರ್ಜಿಯ ಮೇಲೆ ವಾದ ಮಂಡಿಸುವಾಗ ದಾಖಲೆಗಳನ್ನು ಹಾಜರುಪಡಿಸಿದ್ದು ಇರುತ್ತದೆ. ವಾದಿಯರು ತಮ್ಮ ಪ್ರಕರಣಕ್ಕೆ ಪೂರಕವಾಗಿ ದಾವಾ ಆಸ್ತಿಗೆ ಸಂಬಂಧಿಸಿದ ಎರಡು ಪಹಣಿ ಪತ್ರಿಕೆ, ಮ್ಯುಟೇಷನ್ ಎಂಟ್ರಿ ನಂ.ಹೆಚ್ 128, ಕರಪತ್ರ, ಮೋಜಣಿ ಇಲಾಖೆಯ ನಕಾಶೆ ಹಾಗೂ

ಪ್ರತಿವಾದಿಯರು ದೇವಸ್ಥಾನ ಕಟ್ಟುತ್ತಿರುವ ಬಗ್ಗೆ 9 ಫೋಟೋ ಹಾಗೂ ಅವುಗಳ ಸಿ.ಡಿ. ಮತ್ತು ಪೋಲೀಸ್ ಇಲಾಖೆಯವರು ನೀಡಿದ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದು ಇರುತ್ತದೆ. ಇತ್ತಕಡೆ ಪ್ರತಿವಾದಿಯರು ತಮ್ಮ ಪ್ರಕರಣಕ್ಕೆ ಪೂರಕವಾಗಿ ಎರಡು ಫೋಟೋ, ಒಪ್ಪಿಗೆ ಅಥವಾ ಅನಾಕ್ಷೇಪಣಾ ಪತ್ರ, ಸರ್ವೆ ನಂ.64ಃ1, 64ಃ6, 64ಃ7, 64ಃ8, 64ಃ1 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಇರುತ್ತದೆ.

14. ವಾದಿಯರು ತಮ್ಮ ವಾದ ಪತ್ರದಲ್ಲಿ ದಾವಾ ಆಸ್ತಿಗಳಾದ ಸರ್ವೆ ನಂ.66ಃ1ಕ ಹಾಗೂ 67ಃ1 ನೇದ್ದರಲ್ಲಿ ಪ್ರತಿವಾದಿಯರು ಅತಿಕ್ರಮಣ ಪ್ರವೇಶ ಮಾಡಿ ದೇವಸ್ಥಾನವನ್ನು ಕಟ್ಟಲು ಪ್ರಯತ್ನಿಸಿರುತ್ತಾರೆ ಎಂದು ಹೇಳಿಕೊಂಡಿದ್ದು, ಆದರೆ ಪ್ರತಿವಾದಿಯರು ವಾದಿಯರ ವಾದ ಪತ್ರದಲ್ಲಿ ಹೇಳಿದ ಎಲ್ಲ ಅಂಶಗಳನ್ನು ಅಲ್ಲಗಳೆದು ತಾವು ಅಂಕೋಲ ಗ್ರಾಮ ಸರ್ವೆ ನಂ.64ಃ1, ನೇದ್ದರಲ್ಲಿ ದೇವಸ್ಥಾನ ಕಟ್ಟುತ್ತಿದ್ದೇವೆ ಎಂದು ಹೇಳಿಕೊಂಡಿದ್ದು ಇರುತ್ತದೆ. ಉಭಯ ಪಕ್ಷಗಾರರ ವಾದಪತ್ರ ಮತ್ತು ಪ್ರತಿವಾದ ಪತ್ರವನ್ನು ಸಂಪೂರ್ಣವಾಗಿ ಅವಲೋಕಿಸಿದಾಗ ಪ್ರತಿವಾದಿಯರು ಕರಿದೇವರ ದೇವಸ್ಥಾನವನ್ನು ಕಟ್ಟುತ್ತಿರುವ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. ಅಂದರೆ ಪ್ರತಿವಾದಿಯರು ತಾವು ದೇವಸ್ಥಾನವನ್ನು ಕಟ್ಟುತ್ತಿರುವ ಬಗ್ಗೆ ನಿಖರವಾಗಿ ತಮ್ಮ ಉದಾಹರಣೆಯಲ್ಲಿ ಒಪ್ಪಿಕೊಂಡಿರುತ್ತಾರೆ.

15. ವಾದಿಯರು ಹಾಜರುಪಡಿಸಿದ ಪಹಣಿ ಪತ್ರಿಕೆಗಳನ್ನು ಈ ಹಂತದಲ್ಲಿ ಗಮನಿಸಿದಾಗ ಮೇಲ್ನೋಟಕ್ಕೆ ವಾದಿಯರು ದಾವಾ ಆಸ್ತಿಗಳ ಕಬ್ಜಾ ಹೊಂದಿರುವುದು ಕಂಡು ಬರುತ್ತದೆ. ಅಂದರೆ ದಾವಾ ಆಸ್ತಿಗಳ ಪಹಣಿ ಪತ್ರಿಕೆಯಲ್ಲಿ ವಾದಿಯರ ಹೆಸರು ಮಾಲೀಕ ಮತ್ತು

ಕಬ್ಜಾದಾರ ಕಾಲಂನಲ್ಲಿ ನಮೂದಾಗಿರುವುದು ಈ ಹಂತದಲ್ಲಿ ಮೇಲ್ನೋಟಕ್ಕೆ ಕಂಡುಬರುತ್ತದೆ. ಅಲ್ಲದೆ ವಾದಿಯರು ಹಾಜರುಪಡಿಸಿದ ಫೋಟೋಗಳನ್ನು ಈ ಹಂತದಲ್ಲಿ ಗಮನಿಸಿದಾಗ ಮೇಲ್ನೋಟಕ್ಕೆ ಪ್ರತಿವಾದಿಯರು ಜಮೀನಿನ ಮದ್ಯದಲ್ಲಿ ದೇವಸ್ಥಾನದ ಕಟ್ಟಡವನ್ನು ಕಟ್ಟುತ್ತಿರುವುದು ಕಂಡು ಬರುತ್ತದೆ. ಪ್ರತಿವಾದಿಯರು ದೇವಸ್ಥಾನವನ್ನು ಕಟ್ಟುತ್ತಿರುವ ಬಗ್ಗೆ  ಅಲ್ಲಗಳೆಯುವುದಿಲ್ಲ. ಪ್ರತಿವಾದಿ ಪರ ವಕೀಲರು ತಮ್ಮವಾದವನ್ನು ಮಂಡಿಸುತ್ತಾ ಶ್ರೀಮತಿ ಸುಮಿತ್ರಾ ಕೋಂ ಸಂತೋಷ ನಾಯ್ಕ ಹಾಗೂ ಶ್ರೀಮತಿ ಅಶ್ವಿನಿ ಕೋಂ ನಿತಿನ್ ನಾಯ್ಕ ಇವರು ಒಪ್ಪಿಗೆ ಪತ್ರವನ್ನು ಪ್ರತಿವಾದಿಯರ ಪರವಾಗಿ ಅಂಕೋಲ ಸರ್ವೆ ನಂ.64೯1 ರಲ್ಲಿ ಕರಿ ದೇವರ ದೇವಸ್ಥಾನ ಕಟ್ಟಲು ಪರವಾನಗಿ ನೀಡಿರುತ್ತಾರೆ. ಹೀಗಾಗಿ ವಾದಿಯರು ಸದರ್ ದೇವಸ್ಥಾನವನ್ನು ಕಟ್ಟದಂತೆ ಆದೇಶ ಪಡೆಯಲು ಬರುವುದಿಲ್ಲ ಎಂದು ವಾದ ಮಂಡಿಸಿದ್ದು ಇರುತ್ತದೆ. ಪ್ರತಿವಾದಿಯರು ಹಾಜರುಪಡಿಸಿದ ಒಪ್ಪಿಗೆ ಪತ್ರವನ್ನು ಈ ಹಂತದಲ್ಲಿ ಅವಲೋಕಿಸಿದಾಗ ಸದರ್ ಒಪ್ಪಿಗೆ ಪತ್ರ ಮೇಲ್ನೋಟಕ್ಕೆ ದಿನಾಂಕ 10.8.2018 ರಂದು ಪ್ರತಿವಾದಿಯರ ಪರವಾಗಿ ಬರೆದುಕೊಟ್ಟಿರುವುದು ಕಂಡು ಬರುತ್ತದೆ.  ಅಂದರೆ ಪ್ರಸ್ತುತ ದಾವೆಯನ್ನು ದಾಖಲಿಸಿದ ನಂತರ ಸದರ್ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುವುದು ಮೇಲ್ನೋಟಕ್ಕೆ ಈ ಹಂತದಲ್ಲಿ ಕಂಡು ಬರುತ್ತದೆ.

16. ಪ್ರತಿವಾದಿಯರು ಅಂಕೋಲ ಸರ್ವೆನಂ. 64/1 ಹಾಗೂ 64/6 ರಿಂದ 64/8 ರ ಪಹಣಿ ಪತ್ರಿಕೆಗಳನ್ನು  ಹಾಜರುಪಡಿಸಿದ್ದು ಆದರೆ ಪ್ರತಿವಾದಿಯರು ಮೇಲೆ ಹೇಳಿದ ಆಸ್ತಿಯಲ್ಲಿಯೇ ತಾವು ದೇವಸ್ಥಾನವನ್ನು ಕಟ್ಟುತ್ತಿದ್ದೇವೆ ಎಂದು ತೋರಿಸಲು ಯಾವುದೇ ಇಲಾಖೆಯ ಅಥವಾ ಕಚೇರಿಯ ಪ್ರಮಾಣ ಪತ್ರವನ್ನು ಈ ಹಂತದಲ್ಲಿ ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಯರು ಹಾಜರುಪಡಿಸಿದ

ಒಪ್ಪಿಗೆಯ ಪತ್ರವನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ. ಮೇಲಾಗಿ ಸದರ ಒಪ್ಪಿಗೆ ಪತ್ರವು ದಾವೆ ದಾಖಲಿಸಿದ ನಂತರ ಬರೆದುಕೊಟ್ಟ ಪತ್ರವಾಗಿರುತ್ತದೆ. ಪ್ರತಿವಾದಿಯರು ಅನಾದಿಕಾಲದಿಂದ ಹಾಗೂ ಪೂರ್ವಜರ ಕಾಲದಿಂದ ಕರಿ ದೇವರ ದೇವಸ್ಥಾನ ಅಸ್ತಿತ್ವದಲ್ಲಿ ಇರುತ್ತದೆ ಎಂದು ತಮ್ಮ ಉದಾಹರಣೆಯಲ್ಲಿ ಹೇಳಿಕೊಂಡಿದ್ದು ಈ ಅಂಶವನ್ನು ಪುಷ್ಟೀಕರಿಸುವ ಯಾವುದೇ ದಾಖಲೆ ಈ ಹಂತದಲ್ಲಿ ಮೇಲ್ನೋಟಕ್ಕೆ ಕಂಡು ಬರುವುದಿಲ್ಲ. ಆದ್ದರಿಂದ ವಾದಿಯರು ತಮ್ಮ ವಾದ ಪತ್ರದಲ್ಲಿ ಹೇಳಿಕೊಂಡ ಸಂಗತಿಗಳು ಮತ್ತು ಶಪಥ ಪತ್ರದಲ್ಲಿ ಹೇಳಿದ ಅಂಶಗಳು ಮತ್ತು ದಾವೆಯೊಂದಿಗೆ ಹಾಜರುಪಡಿಸಿದ ದಾಖಲೆಗಳನ್ನು ಈ ಹಂತದಲ್ಲಿ ಅವಲೋಕಿಸಿದಾಗ ಮೇಲ್ನೋಟಕ್ಕೆ ವಾದಿಯರ ಪರವಾಗಿ ಪ್ರಕರಣ ಇರುವುದು ಕಂಡು ಬರುತ್ತದೆ. ಪ್ರತಿವಾದಿಯರ ಪ್ರಕಾರ ಒಂದಾನುವೇಳೆ ತಾವು ದಾವಾ ಆಸ್ತಿಗಳಲ್ಲಿ ದೇವಸ್ಥಾನವನ್ನು ಕಟ್ಟದೇ ಇದ್ದರೆ ಅದನ್ನು ಸಾಕ್ಷಿ ಪುರಾವೆಗಳು ಆದ ನಂತರ ಪರಿಗಣಿಸಬಹುದಾದ ಅಂಶವಾಗಿರುತ್ತದೆ. ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಕಟ್ಟಡವನ್ನು ಕಟ್ಟುತ್ತಿಲ್ಲ ಎಂದು ಸಾಬೀತುಪಡಿಸಿದಾಗ ತಾವು ಕಟ್ಟಡವನ್ನು ಮುಂದುವರೆಸಲು ಯಾವುದೇ ತೊಂದರೆ ಇರುವುದಿಲ್ಲ. ಆ ರೀತಿ ಸಾಬೀತುಪಡಿಸುವುದು ಸಹ ಉಭಯ ಪಕ್ಷಗಾರರ ಸಾಕ್ಷಿ ಪುರಾವೆಗಳು ಆದ ನಂತರ ಪರಿಗಣಿಸಬೇಕಾದ ಅಂಶವಾಗಿರುತ್ತದೆಯೇ ವಿನಃ ಈ ಹಂತದಲ್ಲಿಯೇ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ದೇವಸ್ಥಾನವನ್ನು ಕಟ್ಟುತ್ತಿಲ್ಲ ಎಂಬ ನಿರ್ಧಾರಕ್ಕೆ ಬರಲು ಸಾದ್ಯವಿಲ್ಲ. ಆದ್ದರಿಂದ ನನ್ನ ಅಭಿಪ್ರಾಯದ ಪ್ರಕಾರ ಪ್ರತಿವಾದಿಯರ ನಿಲುವನ್ನು ಉಭಯ ಪಕ್ಷಗಾರರ ಸಾಕ್ಷಿಗಳು ಮುಕ್ತಾಯಗೊಂಡ ನಂತರ ಪರಿಗಣಿಸಬೇಕಾದ ಅಂಶವಾಗಿರುತ್ತದೆ.

17. ಮಾನ್ಯ ಸರ್ವೋಚ್ಚ ನ್ಯಾಯಾಲಯದ **1990 Supp Supreme Court cases 727 *(Wander Limited and another Vs. Antox India Private Limited)*** ನೇ ತೀರ್ಪಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ಹೇಳಲಾಗಿರುತ್ತದೆ.

> *"Usually the prayer for grant of an interlocutory injunction is at a stage when the existence of the legal right asserted by the plaintiff and its alleged violation are both contested and uncertain and remain uncertain till they are established at the trial on evidence. The court at this stage, acts on certain well settled principles of administration of this form of interlocutory remedy which is both temporary and discretionary. The interlocutory remedy is intended to preserve in status quo, the rights of parties which may appear on a prima facie case, the court also, in restraining a defendant from exercising what he considers his legal right, but what the plaintiff would like to be prevented, puts into the scales, as a relevant consideration whether the defendant has yet to commence his enterprise or whether he has already been doing so in which later case considerations is somewhat different from those that applied to a case where the defendants is yet to commence his enterprise are attracted".*

18. 1 ನೇ ಮದ್ಯಂತರ ಅರ್ಜಿಯಲ್ಲಿ ಕೋರಿಕೊಂಡಂತೆ ಅರ್ಜಿಯನ್ನು ಪುರಸ್ಕರಿಸದೇ ಹೋದಲ್ಲಿ ನಿಶ್ಚಿತವಾಗಿ ವಾದಿಯರಿಗೆ ಲುಕ್ಸಾನು ವ ತೊಂದರೆ ಆಗುವ ಸಾದ್ಯತೆ ಇರುತ್ತದೆ ಹಾಗೂ ವಿವಿಧ ತರಹದ ಪ್ರಕರಣಗಳಿಗೆ ಎಡೆ ಮಾಡಿಕೊಟ್ಟಂತಾಗುತ್ತದೆ. ಸದರ್ ಮದ್ಯಂತರ ಅರ್ಜಿಯನ್ನು ಪುರಸ್ಕರಿಸುವುದರಿಂದ ಪ್ರತಿವಾದಿಯರಿಗೆ ಯಾವುದೇ ತೊಂದರೆ ವ ತೊಡಕು ಉಂಟಾಗುವುದಿಲ್ಲ. ಮೇಲಾಗಿ ಪ್ರತಿವಾದಿಯರು ತಾವು ದೇವಸ್ಥಾನದ ಕಮಿಟಿಯ ಸದಸ್ಯರು ಅಥವಾ ದೇವಸ್ಥಾನ ನೋಂದಣಿ ಆಗಿದೆ ಇಲ್ಲವೋ ಎನ್ನುವ ಬಗ್ಗೆ ಯಾವುದೇ ಅಧಿಕೃತ ದಾಖಲೆಯನ್ನೂ ಸಹ ಹಾಜರುಪಡಿಸಿರುವುದಿಲ್ಲ. ಬ್ಯಾಲೆನ್ಸ್ ಆಫ್ ಕನ್ವೀನಿಯನ್ಸ್ ಸಹ ವಾದಿಯರ ಪರವಾಗಿ ಇರುವುದರಿಂದ, ವಾದಿಯರು ಮದ್ಯಂತರ ಅರ್ಜಿಯಲ್ಲಿ ಕೋರಿಕೊಂಡಂತೆ ಪ್ರತಿವಾದಿಯರ ವಿರುದ್ಧ ತಾತ್ಪೂರ್ತಿಕ ನಿಷೇಧಾಜ್ಞೆ ಆದೇಶ ಮಾಡಿದಲ್ಲಿ ಪ್ರತಿವಾದಿಯರಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ. ಅಲ್ಲದೆ ವಾದಿಯರು ಹಾಜರುಪಡಿಸಿದ ಫೋಟೋಗಳನ್ನು ಗಮನಿಸಿದಾಗ ಪ್ರತಿವಾದಿಯರು ದಾವೆಯನ್ನು ದಾಖಲಿಸಿದ ಸಮಯದಲ್ಲಿ ದೇವಸ್ಥಾನವನ್ನು ಕಟ್ಟಲು ಪ್ರಾರಂಭ ಮಾಡಿದ್ದು ದಾವೆ ದಾಖಲಾಗಿ ನೋಟೀಸು ಜಾರಿಯಾದ ನಂತರ ದೇವಸ್ಥಾನದ ಕಟ್ಟಡವನ್ನು ಗೋಡೆಯತನಕ ಕಟ್ಟಿರುವುದು ಕಂಡು ಬರುತ್ತದೆ. ಆದ್ದರಿಂದ ವಿವಿಧ ಪ್ರಕರಣಗಳು ಉಂಟಾಗುವುದನ್ನು ತಡೆಗಟ್ಟುವ ಉದ್ದೇಶದಿಂದ ಪ್ರತಿವಾದಿಯರ ವಿರುದ್ದ ತಾತ್ಪೂರ್ತಿಕ ತಡೆಯಾಜ್ಞೆ ಆದೇಶ ಹೊರಡಿಸುವುದು ಅವಶ್ಯವಾಗಿರುತ್ತದೆ. ವಾದಿಯರು ಮೇಲ್ನೋಟಕ್ಕೆ ಪ್ರತಿವಾದಿಯರ ವಿರುದ್ಧ ಪ್ರಕರಣ ಇರುತ್ತದೆ ಎಂದು ಈ ಹಂತದಲ್ಲಿ ತೋರಿಸಿಕೊಟ್ಟಿರುವುದರಿಂದ, ಮೇಲೆ ಉದಾಹರಿಸಿದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು **1990 Supp Supreme**

**Court cases 727** ಈ ಪ್ರಕರಣಕ್ಕೆ ಅನ್ವಯಿಸುವುದರಿಂದ, ಮದ್ಯಂತರ ಅರ್ಜಿಯನ್ನು ಪುರಸ್ಕರಿಸದೇ ಹೋದರೆ ವಾದಿಯರಿಗೆ ಲುಕ್ಸಾನು ಆಗುವ ಸಂಭವ ಇರುವುದರಿಂದ ಹಾಗೂ ಬ್ಯಾಲೆನ್ಸ್ ಆಫ್ ಕನ್ವೀನಿಯ್ನ್ಸ ವಾದಿಯರ ಪರವಾಗಿ ಇರುವುದರಿಂದ ನಾನು **ಅಂಶ ನಂ.1 ರಿಂದ 3 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ**.

19. **<u>ಅಂಶ ನಂ.4</u>ಃ-** ಈ ಮೇಲೆ ನಮೂದಿಸಿದ ಕಾರಣ ವ ಸಂಗತಿಗಳಂದ ಈ ಕೆಳಗಿನಂತೆ ಆದೇಶ ಮಾಡಲಾಗಿರುತ್ತದೆಃ

**<u>ಆದೇಶ</u>**

ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 39 ನಿಯಮ 1 ಮತ್ತು 2 ಹಾಗೂ ಸಹ ಕಲಂ 151 ರ ಅಡಿಯಲ್ಲಿ ಸಲ್ಲಿಸಿದ 1 ನೇ ಮದ್ಯಂತರ ಅರ್ಜಿಯನ್ನು ಪುರಸ್ಕರಿಸಲಾಗಿರುತ್ತದೆ.

ಪ್ರತಿವಾದಿಯರು ದಾವೆಯು ಅಂತಿಮವಾಗಿ ಗುಣಾವಗುಣಗಳ ಮೇಲೆ ನಿಖಾಲೆಯಾಗುವವರೆಗೆ ದಾವಾ ಆಸ್ತಿಗಳಲ್ಲಿ ಯಾವುದೇ ಕಟ್ಟಡವನ್ನು ಕಟ್ಟದಂತೆ ಹಾಗೂ ವಾದಿಯರ ಶಾಂತಿಯುತ ಕಬ್ಜಾ ಸಾಗುವಳಿಗೆ ತೊಂದರೆ ನೀಡದಂತೆ ಪ್ರತಿವಾದಿಯರನ್ನು ತಾತ್ಪೂರ್ತಿಕ ತಡೆಯಾಜ್ಞೆ ಮುಖಾಂತರ ನಿರ್ಬಂಧಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕರಿಸಿದ ನಂತರ ತಿದ್ದುಪಡಿ ಮಾಡಿ ಪರಿಶೀಲಿಸಿ ನಂತರ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 5ನೇ ಸೆಪ್ಟೆಂಬರ್ 2018 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ಶಂಭುಲಿಂಗಯ್ಯ ಮೂಡಿಮಠ್)**

ಸಿವಿಲ್ ನ್ಯಾಯಾಧೀಶರು, ಅಂಕೋಲಾ